“ಸಾಧ್ಯವೇ ಇಲ್ಲ! ನನ್ನ ಕೊರಳು ಕೊಯ್ದರೂ ಹೇಳೊಲ್ಲ ನಾನು.”

“ಬೇಡ. ನೀನ್ಯಾಕೆ ಹೇಳ್ಬೇಕು? ನಾಳೆ ನಾನೇ ಹೇಳ್ತೀನಿ. ಆಕಾಶಕ್ಕೆ ಮುಖ ಮಾಡಿಕೊಂಡು, ಕೊರಳು ಎತ್ತಿ ಕೇಕೆ ಹಾಕಿ ಹೇಳ್ತಿನಿ. ಅದೊಂದು ಅವಿಸ್ಮರಣೀಯ ಸಂಭ್ರಮ ಅನ್ನಿಸಬೇಕು. ಹ್ಯಾಗೂ ಗಟ್ಟಿಮೇಳ ಇರೋದಿಲ್ಲವಲ್ಲ!”

“ಹೌದ? ಕಂಗ್ರ್ಯಾಟ್ಸ್! ಯಾರಪ್ಪಾ ಆ ಪಾಪಿ ಹೆಣ್ಣು?”

“ಹೇಳೊಲ್ಲ, ಹೇಳೊಲ್ಲ, ನನ್ನ ಕೊರಳು ಕೊಯ್ದರೂ ಹೇಳೊಲ್ಲ...”

“ಸರಿ ಹಾಗಾದರೆ... ನಿನ್ನ ಜೊತೆ ಟೂ ಟೂ ಟೂ.”

“ನಾನು ಅಷ್ಟೇ... ಟೂ ಟೂ ಟೂ.”

ಇಬ್ಬರೂ ಮುತ್ತು ತುಂಬಿದ ಮುಖದ ಇಮೋಜಿ ಹಂಚಿಕೊಂಡು ಮಲಗಿಬಿಟ್ಟರು.

ಬೆಳಗ್ಗೆ ಪರಿಣತಿ ಟ್ಯಾಕ್ಸಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ಅಕ್ಕನ ಫೋನ್ ಬಂತು. ಅದು ಮನೆಯಿಂದ ಮಾಡುತ್ತಿರುವ ಫೋನ್ ಅಲ್ಲವೆನ್ನಿಸಿತು. ಬಸ್ಸಿನ ಹಾರನ್ನು, ಆಟೋರಿಕ್ಷಾಗಳ ಸದ್ದು, ಕಂಡಕ್ಟರ್‌ನ ‘ಬೆಂಗ್ಳೂರ್ ಬೆಂಗ್ಳೂರ್’ ಕೂಗು... ಪ್ರಯಾಣಿಕರ ಪರದಾಟದ ಗಲಾಟೆ... ಅರೆ! ಅರೆ! ಇದೇನು? ಎನ್ನುತ್ತಿದ್ದಂತೆಯೇ, ಮಗಳು ಸಮ್ಮತಿ, “ಅಮ್ಮ!” ಅಂದುದಷ್ಟೇ ಕೇಳಿದ್ದು... ಮತ್ತೆ ಅಳು...

